


ಬ್ರ. ಅದ್ವೈತ ಚೈತನ್ಯ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಮಿಲರೇಪ ಕೆಲವು ದಿನ ಕಾದ. ಮಾರ್ಪ ಅವನಿಗೆ ವಿದ್ಯೆ ಕಲಿಸುವಂತೆ ಕಾಣಲಿಲ್ಲ. ತಾನೇ ಹೋಗಿ ಗುರುವನ್ನು ಬೇಡಿದ. ಆಗ ಮಾರ್ಪ, "ನೀನೊಬ್ಬ ಮಾಂತ್ರಿಕನೆನ್ನುತ್ತೀ! ಲೂ ಮತ್ತು ಟ್ಸಂಗ್ ಪ್ರದೇಶದಿಂದ ಇಲ್ಲಿಗೆ ಬರುವ ಶಿಷ್ಯರು, ಹಾಗೂ ಗೃಹಸ್ಥರು ಅಲ್ಲಿನ ಕಳ್ಳಕಾಕರಿಂದ ತೊಂದರೆಗೀಡಾಗುತ್ತಾರೆ. ನೀನು ಅವರ ಮೇಲೆ ಪ್ರಬಲವಾದ ಚಂಡಮಾರುತ ಬೀಸಿ ನಾಶ ಮಾಡಿದ್ದಾದರೆ ನಿನಗೆ ಉಪದೇಶ ನೀಡುತ್ತೇನೆ" ಎಂದ. ಗುರು ಹೇಳಿದಂತೆ ಮಾಡಿದ ಮಿಲರೇಪ. ಅನಂತರ ತನಗೆ ಉಪದೇಶ ನೀಡುವಂತೆ ಮಿಲರೇಪ ಪ್ರಾರ್ಥಿಸಿದ. ಆಗ ಗುರು ಸಿಟ್ಟಾಗಿ, "ಏನು? ಅಷ್ಟೊಂದು ಪವಿತ್ರ ವಿದ್ಯೆಯನ್ನು ಈ ಸಣ್ಣ ಮಾಂತ್ರಿಕ ವಿದ್ಯೆಗೆ ಪ್ರತಿಯಾಗಿ ನಿನಗೆ ಕಲಿಸಬೇಕೆ? ಎಷ್ಟೊಂದು ಕಷ್ಟಪಟ್ಟು ಅದನ್ನು ಭಾರತದಿಂದ ಕಲಿತುಕೊಂಡು ಬಂದೆ! ನಿಜವಾಗಿಯೂ ನಿನಗೆ ವಿದ್ಯೆ ಬೇಕಿದ್ದರೆ, ನನ್ನನ್ನು ಮತ್ತು ನನ್ನ ಶಿಷ್ಯರನ್ನು ಪೀಡಿಸುವ ಲ್ಹೊಬ್ರಾಕ್ ಗುಡ್ಡಗಾಡಿನ ಜನರನ್ನು ನಾಶಮಾಡು" ಎಂದ. ಮಿಲರೇಪ ಅದನ್ನೂ ಮಾಡಿದ. ಆ ಗುಡ್ಡಗಾಡಿನ ಜನರು ತಮ್ಮಲ್ಲೇ ಹೊಡೆದಾಡಿ ಹಲವು ಮಂದಿ ಸತ್ತರು. ಈಗ ಗುರು ತನಗೆ ಉಪದೇಶ ನೀಡಬಹುದೆಂದುಕೊಂಡ ಮಿಲರೇಪ ಮಾರ್ಪನಲ್ಲಿ ಮತ್ತೆ ಪ್ರಾರ್ಥಿಸಿದ. ಆಗ ಮಾರ್ಪ, "ಓಹೊ, ನಿನ್ನ ಈ ಪಾಪಕರ್ಮಕ್ಕೆ ಅಂಥ ಪವಿತ್ರ ಸತ್ಯವನ್ನು ತಿಳಿಸಿ ಕೊಡಬೇಕೆ! ನಾನೆಷ್ಟು ಕಷ್ಟಪಟ್ಟು ಈ ವಿದ್ಯೆಯನ್ನು ಭಾರತದಿಂದ ತಂದೆ! ನಿನ್ನ ಮಾತು ಕೇಳಿದರೆ ಜನ ನಕ್ಕಾರು! ವಿದ್ಯೆ ಬೇಕಿದ್ದರೆ, ನಿನ್ನ ಮಾಂತ್ರಿಕ ವಿದ್ಯೆಯನ್ನೆಲ್ಲ ನಿಲ್ಲಿಸು; ನಿನ್ನಿಂದ ತೊಂದರೆಗೀಡಾದವರಿಗೆಲ್ಲ ಸಹಾಯ ಮಾಡು" ಎಂದು ಚೆನ್ನಾಗಿ ಬಯ್ದು ಮಿಲರೇಪನನ್ನು ಹೊಡೆಯುವುದಕ್ಕೇ ಬಂದ ಮಾರ್ಪ. ಮಿಲರೇಪ ಈಗ ಅಳತೊಡಗಿದ. ಆಗ ಗುರುಪತ್ನಿ ಡಮೆಮ ಬಂದು ಅವನನ್ನು ಸಮಾಧಾನ ಮಾಡಿದಳು.

ಮರುದಿನ ಬೆಳಿಗ್ಗೆ ಮಾರ್ಪ ಮಿಲರೇಪನ ಬಳಿಗೆ ಬಂದು, "ನಿನ್ನೆ ನಾನು ತುಸು ಕಠಿಣವಾಗಿ ವರ್ತಿಸಿರಬೇಕು. ಅದಕ್ಕಾಗಿ ದುಃಖಿಸಬೇಡ. ನನ್ನ ಮಗನಿಗಾಗಿ ಒಂದು ಮನೆಯನ್ನು ಕಟ್ಟಿಕೊಡು. ಅನಂತರ ಉಪದೇಶ ನೀಡುತ್ತೇನೆ" ಎಂದ. ಮಿಲರೇಪ ಮಾರ್ಪ ತೋರಿಸಿದ ಸ್ಥಳದಲ್ಲಿ ಮನೆ ಕಟ್ಟಲಾರಂಭಿಸಿದ. ನಿರ್ಮಾಣ ಅರ್ಧವಾಗಿರುವಾಗಲೇ ಮಾರ್ಪ ಬಂದು "ಇದನ್ನು ಕಟ್ಟಲು ಹೇಳಿದಾಗ ನಾನು ಚೆನ್ನಾಗಿ ಯೋಚಿಸಿರಲಿಲ್ಲ. ಇದನ್ನು ಪೂರ್ತಿ ನೆಲಸಮ ಮಾಡಿ, ಕಲ್ಲು ಮಣ್ಣು ಇತ್ಯಾದಿ ಎಲ್ಲಿತ್ತೋ ಅಲ್ಲೇ ಹಾಕಿಬಿಡು" ಎಂದು ಆಜ್ಞಾಪಿಸಿದ. ಮಿಲರೇಪ ಮರುಮಾತಾಡದೆ ಅಂತೆಯೇ ಮಾಡಿದ. ಮಾರ್ಪ ಇನ್ನೊಂದು ಸ್ಥಳವನ್ನು ತೋರಿಸಿ, ಅಲ್ಲಿ ಅರ್ಧಚಂದ್ರಾಕೃತಿಯ ಕಟ್ಟಡ ನಿರ್ಮಿಸಲು ಹೇಳಿದ. ಈ ಬಾರಿಯೂ ಅರ್ಧ ಕಟ್ಟುವಷ್ಟರಲ್ಲಿ ಅದೆಲ್ಲವನ್ನು ನೆಲಸಮ ಮಾಡಲು ಹೇಳಿದ. ಮಿಲರೇಪ ಕಟ್ಟಡ ನೆಲಸಮ ಮಾಡಿದ. ಕಲ್ಲು ಮಣ್ಣು ಇತ್ಯಾದಿ ಮೊದಲಿದ್ದಲ್ಲೇ ಹಾಕಿ ಬಂದ.

ಕಣಿವೆಯ ಬೇರೊಂದು ಭಾಗವನ್ನು ತೋರಿಸಿ ಮಾರ್ಪ, "ಕಳೆದೆರಡು ಬಾರಿ ನನ್ನ ಮನಸ್ಸು ಸರಿಯಿರಲಿಲ್ಲ. ಈ ಸಲ ಹಾಗಾಗದು. ಈಗ ಇಲ್ಲಿ ತ್ರಿಕೋಣಾಕೃತಿಯ ಕಟ್ಟಡ ನಿರ್ಮಿಸು. ತಾಂತ್ರಿಕನ ನಿವಾಸಕ್ಕೆ ಅದು ಸರಿಯಾದೀತು" ಎಂದ. ಕಳೆದ ಸಲದಂತೆ ಈ ಸಲವೂ ಉರುಳಿಸಲು ಹೇಳಿದರೆ? "ಗುರುಗಳೇ, ಚೆನ್ನಾಗಿ ಆಲೋಚಿಸಿ ಹೇಳಿ. ಪುನಃ ಪುನಃ ಉರುಳಿಸಿ ಮತ್ತೆ ಕಟ್ಟುವಂತಾಗಬಾರದು" ಎಂದ ಮಿಲರೇಪ. "ಇಲ್ಲ, ಈ ಬಾರಿ ಹಾಗೆ ಮಾಡುವುದಿಲ್ಲ" ಎಂದು ಮಾರ್ಪ ಭರವಸೆಯಿತ್ತ.

ತ್ರಿಕೋಣಾಕೃತಿಯ ಕಟ್ಟಡವನ್ನು ಮುಕ್ಕಾಲು ಪಾಲು ಮುಗಿಸುವಷ್ಟರಲ್ಲೇ ಮಾರ್ಪ ಅಲ್ಲಿಗೆ ಬಂದ. "ಇದನ್ನಿಲ್ಲಿ ಹೀಗೆ ಕಟ್ಟಲು ಯಾರು ನಿನಗೆ ಹೇಳಿದರು?" ಎಂದು ಗದರಿಸಿದ. ಮಿಲರೇಪ ಬೆಚ್ಚಿ ಬಿದ್ದು, "ನೀವೇ ಹೇಳಿದಿರಿ—ತ್ರಿಕೋಣಾಕೃತಿಯ ಕಟ್ಟಡ ಕಟ್ಟಬೇಕೆಂದಿರಿ" ಎಂದ. "ಹಾಗೆ ಹೇಳಿದಂತೆ ನನಗೆ ನೆನಪಿಲ್ಲ. ಹೇಳಿದ್ದರೆ, ಆಗ ನನಗೆ ಪ್ರಜ್ಞೆಯಿದ್ದಿರಲಿಕ್ಕಿಲ್ಲ" ಎಂದ ಮಾರ್ಪ. "ಇಲ್ಲ ಗುರುಗಳೆ, ನೀವು ಚೆನ್ನಾಗಿಯೇ ಇದ್ದಿರಿ" ಮಿಲರೇಪ ಹೇಳಿದ. ಮಾರ್ಪ ಕೋಪಿಸಿಕೊಂಡು, "ಅದಕ್ಕೇನು ಸಾಕ್ಷಿ? ಈ ಕಟ್ಟಡ ತ್ರಿಕೋಣಾಕೃತಿಯಲ್ಲಿದ್ದು ಮಾಂತ್ರಿಕ ರೀತಿಯಲ್ಲಿದೆಯಲ್ಲ! ನಿನ್ನ ಮಾಂತ್ರಿಕ ವಿದ್ಯೆಯಿಂದ ನಮ್ಮನ್ನೆಲ್ಲ ಮುಗಿಸಹೊರಟಿದ್ದೀಯ? ನಿನಗೆ ಉಪದೇಶ ಬೇಕಿದ್ದರೆ ಈ ಕಟ್ಟಡವನ್ನು ಮೊದಲು ಉರುಳಿಸು. ಇಲ್ಲವಾದರೆ ಎಲ್ಲಾದರೂ ಹೊರಟುಹೋಗು" ಎಂದು ಹೇಳಿ ಹೊರಟುಹೋದ.

ಕೆಲವು ದಿನಗಳು ಕಳೆದವು. ಮಾರ್ಪ ಮಿಲರೇಪನನ್ನು ಕರೆದ, ಒಂದು ಪ್ರದೇಶವನ್ನು ತೋರಿಸಿ, "ಇಲ್ಲಿ ಚೌಕಾಕೃತಿಯ ಒಂಭತ್ತು ಅಂತಸ್ತಿನ ಒಂದು ಕಟ್ಟಡ ನಿಲುಕಿಸಿದರೆ ನಿನಗೆ

ಖಂಡಿತ ಉಪದೇಶ ನೀಡುತ್ತೇನೆ; ನಿನಗೆ ಊಟ, ಉಡುಪು, ವಸತಿ ಎಲ್ಲವನ್ನೂ ಕೊಡುತ್ತೇನೆ" ಎಂದ. ಮಿಲರೇಪ, "ಗುರುಗಳೇ ಕಳೆದ ಮೂರು ಬಾರಿ ಕಟ್ಟಡ ಉರುಳಿಸಬೇಕಾಯಿತು. ಕೊನೆಯ ಬಾರಿ ತಾವು ಕಟ್ಟಡ ಕಟ್ಟಲು ಹೇಳಿಯೇ ಇಲ್ಲ. ಅದಕ್ಕೆ ಸಾಕ್ಷಿ ಏನು ಎಂದು ಕೇಳಿದಿರಿ. ಈ ಬಾರಿ ಹಾಗಾಗದಿರಲು ದಯವಿಟ್ಟು ಗುರುಪತ್ನಿಯನ್ನು ಕರೆಯೋಣ" ಎಂದ. ಆಗಲಿ ಎಂದು ಮಾರ್ಪ ಗುರುಪತ್ನಿಯನ್ನು ಕರೆಸಿದ. ಆಕೆ ಸಾಕ್ಷಿ ನಿಂತಳು; ಮಿಲರೇಪ ಕಟ್ಟಡ ಕಟ್ಟಲು ಆರಂಭಿಸಿದ.

ತಳಪಾಯ ಹಾಕಲು ಮಿಲರೇಪ ಯೋಚಿಸುತ್ತಿದ್ದಾಗ, ಮಾರ್ಪನ ಮೂವರು ಶಿಷ್ಯರು ತಮಾಷೆಗಾಗಿ ಒಂದು ದೊಡ್ಡ ಬಂಡೆಯನ್ನು ತಂದು ತಳಪಾಯ ಹಾಕಬೇಕಾದಲ್ಲಿ ಹಾಕಿದರು. ಅನಾಯಾಸವಾಗಿ ದೊರಕಿದ ಕಲ್ಲು ತಳಪಾಯಕ್ಕೇ ಇರಲಿ ಎಂದುಕೊಂಡು ಮಿಲರೇಪ ಅದರ ಮೇಲೆ ಎರಡಂತಸ್ತು ಕಟ್ಟಿದ. ಅಷ್ಟರಲ್ಲಿ ಮಾರ್ಪ ಬಂದ. ಬಂಡೆಯನ್ನು ನೋಡಿ "ಇದೆಲ್ಲಿಂದ ಬಂತು?" ಎಂದ. ಮಿಲರೇಪ ಎಲ್ಲವನ್ನೂ ವಿವರಿಸಿದ. ಮಾರ್ಪ ಸಿಟ್ಟಾಗಿ, "ನಿನ್ನ ಕೆಲಸಕ್ಕಾಗಿ ನನ್ನ ಶಿಷ್ಯರು ತಂದ ಬಂಡೆಯನ್ನು ಬಳಸಬಾರದು. ಅದನ್ನು ಮೊದಲಿದ್ದಲ್ಲಿಗೇ ಕೊಂಡೊಯ್ದು ಹಾಕು" ಎಂದ. ಮಾರ್ಪ ಮೊದಲೇ ಕಟ್ಟಡ ಉರುಳಿಸಲು ಹೇಳುವುದಿಲ್ಲವೆಂದು ನೀಡಿದ್ದ ಭರವಸೆಯನ್ನು ಮಿಲರೇಪ ನೆನಪಿಸಿದ. ಮಾರ್ಪ "ನನ್ನ ಶಿಷ್ಯರಿಂದ ಕೆಲಸ ಮಾಡಿಸಲು ನಾನು ಹೇಳಿಲ್ಲ. ಅಲ್ಲದೆ, ಕಟ್ಟಡ ಉರುಳಿಸೆಂದೂ ನಾನು ಹೇಳಿಲ್ಲ. ನನ್ನ ಶಿಷ್ಯರು ತಂದ ಬಂಡೆಯನ್ನು ಇಲ್ಲಿಂದ ಸಾಗಿಸಿ ಮೊದಲೆಲ್ಲಿತ್ತೋ ಅಲ್ಲೇ ಹಾಕು—ಎಂದಷ್ಟೇ ನಾನು ಹೇಳುತ್ತಿರುವುದು" ಎಂದ. ವಿಧಿಯಿಲ್ಲದೆ ಮಿಲರೇಪ ಎರಡಂತಸ್ತಿನ ಕಟ್ಟಡವನ್ನು ಉರುಳಿಸಿದ; ಬಂಡೆಯನ್ನು ಮೊದಲಿದ್ದಲ್ಲಿಗೇ ಸಾಗಿಸಿದ. ಆಗ ಮಾರ್ಪ "ಈಗ ಬೇಕಾದರೆ ಆ ಬಂಡೆಯನ್ನು ತಂದು ಬಳಸಿಕೋ; ನಿನಗೆ ಅವಕಾಶವಿದೆ" ಎಂದ. ಗುರುವಿನ ಮಾತು ಮೀರಲಾಗದೆ ಮಿಲರೇಪ ಮತ್ತೆ ಮೂರು ಜನ ಹೊರುವ ಬಂಡೆಯನ್ನು ಒಬ್ಬನೇ ತಂದ. ಯಾರ ಸಹಾಯವೂ ಇಲ್ಲದೆ ಏಳು ಅಂತಸ್ತನ್ನು ಕಟ್ಟಿ ಪೂರೈಸಿದ. ಆ ವೇಳೆಗೆ ಇತರ ಶಿಷ್ಯರಿಗೆ ಮಾರ್ಪನಿಂದ ಮಂತ್ರೋಪದೇಶವಾಗುವುದಿತ್ತು. ಗುರುಪತ್ನಿ ಮಿಲರೇಪನನ್ನು ಕರೆದು, ಆ ಶಿಷ್ಯರ ಮಧ್ಯೆ ನೀನೂ ಕುಳಿತು ಅವರಿಂದ ಉಪದೇಶ ಪಡೆಯಲು ಕೇಳಿಕೋ ಎಂದಳು. ಅಂತೆಯೇ ಮಾಡಿದ ಮಿಲರೇಪನನ್ನು ಕಂಡು, "ಗುರುದಕ್ಷಿಣೆಯೆಲ್ಲಿ?" ಎಂದು ಕೇಳಿದ ಮಾರ್ಪ. "ಒಂಭತ್ತು ಅಂತಸ್ತಿನ ಕಟ್ಟಡ ಕಟ್ಟಿದ್ದೇನೆ—ಅದೇ ದಕ್ಷಿಣೆಯಲ್ಲವೆ?" ಎಂದ ಮಿಲರೇಪ, ವಿನೀತನಾಗಿ. "ಅಬ್ಬಾ, ಏನು ಗರ್ವ, ಏನು ಅಹಂಕಾರ! ಒಂದಿಷ್ಟು ಅಡಿ ಮಣ್ಣಿನ ಗೋಡೆ ಕಟ್ಟಿದಷ್ಟಕ್ಕೇ ಏನು ಯೋಗ್ಯತೆ ಬಂತು? ಭಾರತದಿಂದ ನನ್ನ ವಿದ್ಯೆ ತರುವಾಗ ನಾನು ಪಟ್ಟ ಶ್ರಮದ ಮುಂದೆ ಇದೇನು?" ಎಂದು ಬಯ್ದು ಥಳಿಸಿ ಹೊರಗೆ ನೂಕಿಬಿಟ್ಟ.

ಮಿಲರೇಪನಿಗೆ ದುಃಖ ಉಮ್ಮಳಿಸಿ ಬಂತು. ತನಗೆ ಈ ಜನ್ಮದಲ್ಲಿ ಮಂತ್ರ ದೊರಕದು ಎಂದು ಅವನಿಗೆ ಖಾತ್ರಿಯಾಯಿತು. ಅವನು ತನ್ನ ಪ್ರಾಣ ಕಳೆದುಕೊಳ್ಳಲು ನಿರ್ಧರಿಸಿದ. ಆಗ ಗುರುಪತ್ನಿ ಅವನನ್ನು ಸಂತೈಸಿದಳು. ಒಂದು ದಿನವೆಲ್ಲ ಅಳುತ್ತ ಕುಳಿತ ಮಿಲರೇಪ. ಮರುದಿನ ಮತ್ತೆ ಕಟ್ಟಡ ಕಟ್ಟುವುದನ್ನು ಮುಂದುವರಿಸಿದ. ಈಗ ಅವನ ಬೆನ್ನೆಲ್ಲ ಹುಣ್ಣುಗಳಾಗಿ ಅದರಿಂದ ರಕ್ತ ಹರಿಯತೊಡಗಿತು. ಗುರುಪತ್ನಿ ಡಮೋಮ ಇದನ್ನು ಮಾರ್ಪನಿಗೆ ಹೇಳಲು, ಅವನು ಬೆನ್ನ ಮೇಲೆ ಬಟ್ಟೆ ಕಟ್ಟಿ ಕೆಲಸ ಮಾಡಲು ಆದೇಶಿಸಿದ.

ಇನ್ನೊಂದು ಬಾರಿ ಮಿಲರೇಪ, ಡಮೋಮ ಇಬ್ಬರೂ ಮಾತನಾಡಿಕೊಂಡು, ಮಿಲರೇಪ ಅಲ್ಲಿಂದ ಹೊರಟುಹೋಗುವಂತೆ ನಾಟಕವಾಡಿದರು. ಆಗಲಾದರೂ ಮಾರ್ಪ ಉಪದೇಶ ನೀಡುವನೆಂಬ ಆಸೆ ಅವರಿಗೆ. ಆದರೆ ಮಾರ್ಪನಿಗೆ ಇದು ತಿಳಿದುಹೋಗಿ ಮಿಲರೇಪನಿಗೆ "ನಿನ್ನ ದೇಹ, ಮನಸ್ಸು ಎಲ್ಲವನ್ನೂ ನನಗೆ ಕೊಟ್ಟಿರುವೆ. ಆದ್ದರಿಂದ ನೀನೆಲ್ಲಿಗೂ ಹೋಗುವ ಹಾಗೆ ಇಲ್ಲ" ಎಂದ. ಇದನ್ನು ಕೇಳಿ ಮಿಲರೇಪ ಅಳುತ್ತ ಕೋಣೆಯಲ್ಲಿ ಬಿದ್ದು ಹೊರಳಾಡತೊಡಗಿದ. ಕರುಣೆಯಿಂದ ಡಮೋಮ ಅವನನ್ನು ಸಂತೈಸಿ 'ವಜ್ರವಾರಾಹಿ' ಎಂಬ ಮಂತ್ರವನ್ನು ಉಪದೇಶಿಸಿದಳು.

ಜುಂಗ್ ಪ್ರಾಂತದ ನ್ಗೋಗ್ಟುನ್ ಎಂಬವನು ಮಾರ್ಪನಲ್ಲಿಗೆ ಉಪದೇಶಕ್ಕೆ ಬಂದ. ಆ ಸಲವೂ ಗುರುಪತ್ನಿ ಮಿಲರೇಪನಿಗೆ ಉಪದೇಶ ಕೊಡಿಸಲೆತ್ನಿಸಿದಳು. ಅದೂ ಸಫಲವಾಗಲಿಲ್ಲ. ಮಾರ್ಪ ಶಿಷ್ಯನತ್ತ ಆರ್ಭಟಿಸಿ, ದೊಣ್ಣೆಯೆತ್ತಿ ಹೊಡೆಯ ಹೊರಟಿದ್ದ. ಮಿಲರೇಪ ಹೊರಕ್ಕೆ ಓಡಿಹೋದ. ಈ ಸಲ ನಿಜವಾಗಿಯೂ ಆತ್ಮಹತ್ಯೆ ಮಾಡುವ ನಿಶ್ಚಯ ಮಾಡಿದ ಮಿಲರೇಪ. ಅದನ್ನರಿತ ಗುರುಪತ್ನಿ ಅವನ ಬಳಿಗೆ ಬಂದು, "ಆತ್ಮಹತ್ಯೆ ಅಶುಭ, ಪಾಪ" ಎಂದಳು. ಮಿಲರೇಪನಿಗೆ ಯಾವ ದಾರಿಯೂ ತೋಚದೆ ಮರುದಿನ ಬೆಳಗ್ಗೆ ಯಾರಿಗೂ ಹೇಳದೆ ಊರುಬಿಟ್ಟ.

ಅರ್ಧದಾರಿಯಲ್ಲೇ ಮಿಲರೇಪನಿಗೆ ಗುರುವಿನಲ್ಲಿ ಶ್ರದ್ಧೆ ಬಂತು. ಅವನು ಮತ್ತೆ ಮಾರ್ಪನಲ್ಲಿಗೆ ಹೊರಟ. ಮರಳಿ ಬಂದ ಮಿಲರೇಪನನ್ನು ನೋಡಿ ಮಾರ್ಪ, "ಆ ಕಟ್ಟಡಗಳನ್ನು ಕಟ್ಟಿ ಮುಗಿಸದೆ ನಿನಗೆ ಉಪದೇಶವಿಲ್ಲ" ಎಂದ. ಮಿಲರೇಪನಿಗೆ ಮತ್ತೆ ಹತಾಶೆಯಾಯಿತು. ಗುರುಪತ್ನಿ ಇನ್ನು ಸಹಿಸಲಾಗದೆ, ಉಪಾಯವಾಗಿ ಮಾರ್ಪ ಬರೆದಂತೆ ಒಂದು ಪತ್ರ ಬರೆದು ಮೊಹರು ಮಾಡಿ ಮಿಲರೇಪನನ್ನು ಮಾರ್ಪನ ಸಮರ್ಥ

ಶಿಷ್ಯನಾದ ನ್ಗೋಗ್ಟುನ್ ಬಳಿಗೆ ಕಳಿಸಿದಳು. ಪತ್ರದಲ್ಲಿ ಮಿಲರೇಪನಿಗೆ ಮಂತ್ರೋಪದೇಶ ಮಾಡುವಂತೆ ಮಾರ್ಪನ ಆದೇಶವಿದ್ದುದನ್ನು ಓದಿ ನ್ಗೋಗ್ಟುನ್ ಮಿಲರೇಪನಿಗೆ ಉಪದೇಶ ಮಾಡಿದ. ಆದರೆ ಎಷ್ಟು ಸಾಧನೆ ಮಾಡಿದರೂ ಮಿಲರೇಪನಿಗೆ ಯಾವ ಆಧ್ಯಾತ್ಮಿಕ ಅನುಭವವೂ ಆಗಲಿಲ್ಲ. ನ್ಗೋಗ್ಟುನ್ ಸಂದೇಹ ಬಂದು ಮಿಲರೇಪನಲ್ಲಿ ವಿಚಾರಿಸಿದ—"ಗುರುವಿನ ಅಪ್ಪಣೆ ಇಲ್ಲದೆ ಬಂದಿರಬೇಕು" ಎಂದ. ಮಿಲರೇಪ ನಿಜ ಸಂಗತಿಯನ್ನೆಲ್ಲ ಹೇಳಿದ. ಆಗ ಮಾರ್ಪ ಸಂಗತಿಯನ್ನೆಲ್ಲ ತಿಳಿದು ನ್ಗೋಗ್ಟುನ್‌ಗೊಂದು ಪತ್ರ ಬರೆದು, ತನ್ನ ಭವನಗಳನ್ನೆಲ್ಲ ಪೂರ್ತಿಯಾಗಿ ಕಟ್ಟಿಸಿ ಅವುಗಳ ಗೃಹಪ್ರವೇಶಕ್ಕೆ ಬರಬೇಕೆಂದೂ, ಜೊತೆಗೆ ತನ್ನ ಶಿಷ್ಯ ಮೂರ್ಖ ಮಿಲರೇಪನನ್ನು ಕರೆತರಬೇಕೆಂದೂ ಬರೆದ. ಅದರಂತೆ ನ್ಗೋಗ್ಟುನ್ ಪರಿವಾರ ಸಮೇತ ಹೊರಟ. ಮಿಲರೇಪನೂ ಹೊರಟ.

ಗುರುಪತ್ನಿ ನ್ಗೋಗ್ಟುನ್‌ನನ್ನು ಆದರದಿಂದ ಬರಮಾಡಿಕೊಂಡಳು. ಮಿಲರೇಪ ಮಾರ್ಪನಿಗೆ ನಮಸ್ಕರಿಸಿದ. ಆಗ ಪೂರ್ವಾಭಿಮುಖವಾಗಿ ಕುಳಿತಿದ್ದ ಮಾರ್ಪ ಪಶ್ಚಿಮಕ್ಕೆ ತಿರುಗಿದ. ಮಿಲರೇಪ ಪಶ್ಚಿಮಕ್ಕೆ ಬಂದು ನಮಸ್ಕರಿಸಿದಾಗ ಮಾರ್ಪ ದಕ್ಷಿಣಕ್ಕೆ ತಿರುಗಿದ. ಕೊನೆಗೆ ಮಿಲರೇಪ ಗುರುವಿಗೆ ನ್ಗೋಗ್ಟುನ್ ಬಂದ ವಿಚಾರ ತಿಳಿಸಿದಾಗ ಮಾರ್ಪ ಕೋಪದಿಂದ ಕೂಗಾಡಿದ. ಅವನು ನ್ಗೋಗ್ಟುನ್‌ನನ್ನು ದೊಣ್ಣೆಯೆತ್ತಿ ಗದರಿಸಿದ, ಮಿಲರೇಪನಿಗೆ ಮಂತ್ರೋಪದೇಶ ಮಾಡಿದ್ದಕ್ಕಾಗಿ. ಮಿಲರೇಪ ಒಂದೆಡೆ ಅಳುತ್ತ ಅಲ್ಲೇ ಪ್ರಾಣ ನೀಗಲು ಯತ್ನಿಸಿದ. ಆಗ ಅಲ್ಲಿಗೆ ಬಂದ ನ್ಗೋಗ್ಟುನ್ ಅವನನ್ನು ತಡೆದು ಸಂತೈಸಿ—"ಪ್ರಾಣ ಕಳೆದುಕೊಳ್ಳಬಾರದು; ಅದು ಅಪರಾಧ" ಎಂದ. ಮಾರ್ಪನ ಕೋಪ ತಣ್ಣಗಾದಾಗ ಅವನು ತನ್ನ ಶಿಷ್ಯ ನ್ಗೋಗ್ಟುನ್‌ನನ್ನು ಬರಹೇಳಿದ. ಆಗ ಮಾರ್ಪ ಶಾಂತನಾದುದನ್ನು ತಿಳಿದ ಡಮೇಮ "ಮಿಲರೇಪನೂ ಬರಬಹುದೆ?" ಎಂದು ಕೇಳಿದಳು. ಆಗ ಮಾರ್ಪ "ಇಂದು ಮಿಲರೇಪ ವಿಶೇಷ ಅತಿಥಿ" ಎಂದ. ಆಗ ಗುರುಪತ್ನಿ ಮಿಲರೇಪನ ಬಳಿಗೆ ಬಂದು, "ಮಗು, ಇಂದಿಗೆ ನಿನ್ನ ಕಷ್ಟ ಕೊನೆಗೊಂಡಿತು. ಗುರು ನಿನ್ನ ಮೇಲೆ ಕರುಣೆ ತೋರಿದ್ದಾನೆ" ಎಂದಳು. ಮಿಲರೇಪ ಸಂದೇಹದಿಂದಲೇ ಗುರುವಿನ ಬಳಿಗೆ ಹೋದ. ಮಾರ್ಪ "ಇದರಲ್ಲಿ ಯಾರ ತಪ್ಪೂ ಇಲ್ಲ. ನಿನ್ನ ಹಿಂದಿನ ಪಾಪಕರ್ಮಗಳನ್ನು ತೊಳೆಯಲೆಂದೇ ಹೀಗೆ ನಾನು ಬವಣೆಪಡಿಸಿದೆ. ಇದರಿಂದ ನಿನ್ನ ಪಾಪಗಳೆಲ್ಲ ನಾಶವಾದವು. ಈಗ ನಿನಗೆ ಮಂತ್ರೋಪದೇಶ ಮಾಡುತ್ತೇನೆ" ಎಂದ.

ಮಿಲರೇಪ ದಿಗ್ಭ್ರಮೆಯಿಂದ ತಟಸ್ಥನಾಗಿ ನಿಂತ. ಅಂದು ಮಿಲರೇಪನಿಗೆ ಸಂನ್ಯಾಸ ನೀಡಿ, "ಮಿಲರೇಪ ವಜ್ರಧ್ವಜ" ಎಂದು ಹೆಸರುಕೊಟ್ಟರು. ಅವನೊಂದಿಗೆ ಗುರುಪತ್ನಿಯೂ ಇತರರೂ ಆನಂದಿಸಿದರು. ಗುರುವಿನ ಆದೇಶದಂತೆ ಮಠದಲ್ಲಿ ಕೆಲವು ದಿನಗಳು ಇದ್ದ ಬಳಿಕ, ಸಮೀಪದ ಒಂದು ಗುಹೆಯಲ್ಲಿ ತಲೆಯ ಮೇಲೆ ದೀಪವನ್ನಿಟ್ಟುಕೊಂಡು ಮಿಲರೇಪ ಧ್ಯಾನ ಮಾಡಿದ. ಹೀಗೆ ದಿನ, ರಾತ್ರಿ, ಪರಿವೆಯಿಲ್ಲದೆ ಹನ್ನೊಂದು ತಿಂಗಳು ಕಳೆಯಿತು. ಮಿಲರೇಪನಿಗೆ ಬುದ್ಧತ್ವ ಲಭಿಸುವುದಕ್ಕಾಗಿ ವಜ್ರಪ್ರಸ್ಥಾನದ ಉಪದೇಶ ಅಗತ್ಯವಾಗಿತ್ತು. ಇದನ್ನು ಸಂಪಾದಿಸಲು ಮಾರ್ಪ ತನ್ನ ಇಳಿವಯಸ್ಸಿನಲ್ಲೂ ಭಾರತಕ್ಕೆ ಹೋದ. ಅಲ್ಲಿ ತನ್ನ ಗುರು ನರೋಪನಿಂದ ಆ ಉಪದೇಶವನ್ನು ಪಡೆದುಕೊಂಡು ಬಂದ. ಮರಳಿ ಟಿಬೆಟ್ಟಿಗೆ ಬಂದ ಮಾರ್ಪ ಆ ಉಪದೇಶವನ್ನು ಮಿಲರೇಪನಿಗೆ ನೀಡಿದ. ಮಿಲರೇಪ ಗುರುವಿನಾಣತಿಯಂತೆ ಮರಳಿ ತನ್ನ ಊರಿಗೆ ಹೋದ. ಆಗ ಅವನ ತಾಯಿ ತೀರಿಕೊಂಡಿದ್ದಳು. ತಂಗಿ ಪೇಪ ಮಾತ್ರ ಸಿಕ್ಕಿದಳು. ಅವನ ಚಿಕ್ಕಮ್ಮ ಕಣ್ಣೆದುರಿಗೆ ಸಿಕ್ಕರೂ ಅವನು ಸೇಡು ತೀರಿಸದೆ ಅವಳಿಗೆ ಒಳ್ಳೆಯದನ್ನೇ ಬಯಸಿದ. ಅನಂತರ ಒಂದೆಡೆ ಕುಳಿತು ತಪಸ್ಸು ಮಾಡತೊಡಗಿದ ಮಿಲರೇಪ. ಒಂದು ವರ್ಷದವರೆಗೂ ಕುಳಿತಲ್ಲೇ ಇದ್ದ. ಅವನ ದೇಹ ಕ್ಷೀಣಿಸಿತು, ಮೈಬಣ್ಣ ಹಸಿರಾಯಿತು. ಮುಂದೆ ಬೇರೆ ಬೇರೆ ಊರುಗಳಲ್ಲಿ ಅನೇಕ ಶಿಷ್ಯರಿಗೆ ಧರ್ಮೋಪದೇಶ ನೀಡಿದನು. ಟಿಬೆಟ್ ಯೋಗಿಗಳಲ್ಲೆಲ್ಲ ಪ್ರಸಿದ್ಧನಾದ ಮಿಲರೇಪ ತನ್ನ ಎಂಬತ್ನಾಲ್ಕನೇ ವಯಸ್ಸಿನಲ್ಲಿ (ಕ್ರಿ.ಶ. ೧೧೩೫ರಲ್ಲಿ) ದೇಹತ್ಯಾಗ ಮಾಡಿದ.

**ಓದುಗರೇ! ದಯವಿಟ್ಟು ಗಮನಿಸಿ!!**

**ವಿವೇಕಪ್ರಭ ಪತ್ರಿಕೆಯು ದಿವ್ಯತ್ರಯರ ಜೀವನಸಂದೇಶಗಳನ್ನು ಮನೆಮನೆಗೆ ತಲುಪಿಸಲು ಪ್ರಯತ್ನಿಸುತ್ತಿದೆ. ಪತ್ರಿಕೆಯ ಚಂದಾ ಸಂಖ್ಯೆಯನ್ನು ಹೆಚ್ಚಿಸಲು ನಾವು ಸತತವಾಗಿ ಪ್ರಯತ್ನಿಸುತ್ತಿದ್ದೇವೆ. ಪ್ರಚಾರದ ಕೊರತೆಯಿಂದಾಗಿ ಉದಾತ್ತ ವಿಚಾರಗಳು ಜನಸಾಮಾನ್ಯರಿಗೆ ದೊರೆಯದೆ ಸಮಾಜವು ವಿಚ್ಛಿದ್ರವಾಗಿ ಹೋಗುತ್ತಿದೆ. ಆದ್ದರಿಂದ ನಿಮ್ಮ ಸೇವೆಯ ಅಗತ್ಯವಿದೆ. ಈ ವರ್ಷದ ಸೆಪ್ಟೆಂಬರ್, ಅಕ್ಟೋಬರ್ ಹಾಗೂ ನವೆಂಬರ್ ಮಾಸಗಳಲ್ಲಿ ನಿಮಗೆ ಅನುಕೂಲವಿರುವ ಒಂದು ದಿನದಂದು ನಿಮ್ಮ ಬಡಾವಣೆ, ಊರು, ಗ್ರಾಮ ಅಥವಾ ಅಕ್ಕಪಕ್ಕದಲ್ಲಿ ಒಂದು ಸಣ್ಣ ಕಾರ್ಯಕ್ರಮವನ್ನು ಆಯೋಜಿಸಿ, ಹೆಚ್ಚು ಜನರನ್ನು ಒಗ್ಗೂಡಿಸಿ. ನೀವು ಆಯೋಜಿಸುವ ಇಂತಹ 'ಸತ್ಸಂಗ ಕಾರ್ಯಕ್ರಮ'ದಲ್ಲಿ ಪತ್ರಿಕೆ ಹಾಗೂ ರಾಮಕೃಷ್ಣ–ವಿವೇಕಾನಂದ ಸಾಹಿತ್ಯವನ್ನು ಪರಿಚಯ ಮಾಡಿಕೊಡಲು ನಮ್ಮಲ್ಲಿಂದ ಸ್ವಾಮಿಗಳು ಹಾಗೂ ಸ್ವಯಂಸೇವಕರು ಬರುತ್ತಾರೆ. ನಿಮ್ಮಲ್ಲಿಗೆ ಬರುವ ಖರ್ಚನ್ನಾಗಲಿ, ಮತ್ತಾವುದೇ ವೆಚ್ಚವನ್ನಾಗಲಿ ನೀವು ಭರಿಸಬೇಕಾಗಿಲ್ಲ. ಹೆಚ್ಚಿನ ವಿವರಗಳಿಗೆ ನಮ್ಮನ್ನು ಕೂಡಲೆ ಸಂಪರ್ಕಿಸಿ.**

–ಸಂ.